ದಿನಾಂಕಃ **02.08.2023** ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು ವಾದಿ ಪರ ವಕೀಲರಾದ ಶ್ರೀ ಬಿ.ಎಸ್ .ವಿ ರವರಿಂದಃ

ನನ್ನ ತಂದೆ ಮರಣ ಹೊಂದುವ ಪೂರ್ವದಲ್ಲಿ ನಾಸಿಕ್ ನಲ್ಲಿ ವಾಸ ಮಾಡುತ್ತಿದ್ದರು. ನಾನು **2002-2003** ನೇ ಇಸವಿಯಿಂದ ನಾನು ಬೆಂಗಳೂರಿನಲ್ಲಿ ವಾಸ ಮಾಡುತ್ತಿದ್ದೇನೆ. ನನ್ನ ತಂದೆಯೊಂದಿಗೆ ನಾಸಿಕ್ ನಲ್ಲಿ ನನ್ನ ತಾಯಿ ವಾಸ ಮಾಡುತ್ತಿದ್ದಳು. ಪ್ರಸುತ್ತತವಾಗಿ ನನ್ನ ತಾಯಿಯು ನನ್ನ ಅಣ್ಣನ ಜೊತೆ ವಾಸ ಮಾಡುತ್ತಿದ್ದಾರೆ. ನನ್ನ ತಾಯಿಯು ಈಗ ಮಹಾರಾಷ್ಟದಲ್ಲಿ ವಾಸ ಮಾಡುತ್ತಿದ್ದಾರೆ. ನನ್ನ ತಂದೆಯೊಂದಿಗೆ ನನ್ನ ತಾಯಿ ಮಾತ್ರ ವಾಸ ಮಾಡುತ್ತಿದ್ದರು. ಆದರೆ ನನ್ನ ಅಣ್ಣ ಜೊತೆಯಲ್ಲಿ ವಾಸ ಮಾಡುತ್ತಿರಲಿಲ್ಲ. ನನ್ನ ತಂದೆ ಮರಣ ನಂತರ ಅವರಿಗೆ ಸಂಬಂಧಿಸಿದ ಎಲ್ಲಾ ದಾಖಲೆಗಳು ನನ್ನ ತಾಯಿಯ ಬಳಿ ಇದ್ದವು. ನಿಡಿ-**30** ದಾಖಲೆಯು ಒಂದು ಪತ್ರವಾಗಿದ್ದು ಸದರಿ ಪತ್ರವನ್ನು ನನ್ನ ತಂದೆಯು **apartment association** ರವರಿಗೆ ಬರೆದಿರುತ್ತಾರೆ. ನಿಡಿ-**30** ಪತ್ರವನ್ನು **apartment association** ರವರಿಗೆ ಕೊಟ್ಟಿರುತ್ತಾರೆ. ನಿಡಿ-**30** ದಾಖಲೆಗೆ ಸ್ವೀಕೃತಿ ಮೊಹರು ಇರುವುದಿಲ್ಲ. ನಾನು ರಘನಂದನ್ ರವರಿಗೆ ಆತ್ಮಿಯ ಸ್ನೇಹಿತನಾಗಿದ್ದರಿಂದ ರಘನಂದನ್ ಅವರಿಗೆ ಸಹಾಯ ಆಗಲಿ ಎಂದು ನಿಡಿ-**30** ದಾಖಲೆಯನ್ನು ನಾನೇ ಸೃಷ್ಟಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಿಡಿ-**30** ದಾಖಲೆಯಲ್ಲಿನ ನನ್ನ ತಂದೆಯ ಸಹಿಯು ನಿಡಿ-**9** ದಾಖಲೆಯಲ್ಲಿನ ನನ್ನ ತಂದೆಯ ಸಹಿಗೆ ತುಂಬಾ ವ್ಯತ್ಯಾಸ ಇರುತ್ತದೆ

**ಎಂದರೆ ಸರಿಯಲ್ಲ. ನಾನು ಈ ದಾವೆಯಲ್ಲಿ ರಘನಂದನ್ ರವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಯೆ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.**

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಸಾಕ್ಷಿಯ ಸಾಕ್ಷ್ಯವನ್ನು ಬೆರಳಚ್ಚು ಮಾಡಿಸಲಾಯಿತು)

**ಓ. ಹೇ.ಕೇ.ಸ.ಇದೆ.**

**(ಓಂಕಾರಪ್ಪ. ಆರ್.)**
**5 ನೇ ಅ.ನ.ಸಿ.ಸಿ. ನ್ಯಾಯಾಧೀಶರು,**
**ಬೆಂಗಳೂರು ನಗರ.**